ಕನ್ನಡ ಅನುಷ್ಠಾನ ವರ್ಷ – 2009

ಕರ್ಮಣಿ
KARMANI

# ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮ

(ಕರ್ನಾಟಕ ಸರ್ಕಾರದ ಒಂದು ಉದ್ಯಮ)

6ನೇ ಮಹಡಿ,
ಜಯನಗರ ವಾಣಿಜ್ಯ ಸಂಕೀರ್ಣ,
4ನೇ ಬ್ಲಾಕ್, ಜಯನಗರ, ಬೆಂಗಳೂರು–560011

ಸಂಖ್ಯೆ: ಮಅನಿ/ದೇಪುಯೋ/ನಿಯಮ/08/2010-11
1399

ದಿನಾಂಕ: 24-08-2010

ಗೆ,
ಯೋಜನಾಧಿಕಾರಿಗಳು,
ದೇವದಾಸಿ ಪುನರ್ವಸತಿ ಯೋಜನೆ.
.ರಾಯಚೂರು. . . ಜಿಲ್ಲೆ

ಮಾನ್ಯರೇ.

ವಿಷಯ: ಕರ್ನಾಟಕ ದೇವದಾಸಿಯರ (ಸಮರ್ಪಣಾ ನಿಷೇಧ) (ತಿದ್ದುಪಡಿ) ನಿಯಮಗಳು 1988 ಇವುಗಳಿಗೆ ತಿದ್ದುಪಡಿ ಅಧಿಸೂಚನೆಯನ್ವಯ ಕ್ರಮ ವಹಿಸುವ ಕುರಿತು.

ಉಲ್ಲೇಖ: ಸರ್ಕಾರದ ಅಧೀನ ಕಾರ್ಯದರ್ಶಿ-2, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಇವರ ಪತ್ರ ಸಂಖ್ಯೆ: ಮಮಇ/66/ಮಅನಿ/2007 (ಪಿ-2) ದಿನಾಂಕ: 17-08-2010.

ಮೇಲ್ಕಾಣಿಸಿರುವ ವಿಷಯಕ್ಕೆ ಸಂಬಂಧಿಸಿದಂತೆ. ಉಲ್ಲೇಖಿತ ಪತ್ರದನ್ವಯ ಸರ್ಕಾರದ ಕಾರ್ಯದರ್ಶಿ. ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಇಲಾಖೆ ಇವರ ಅಧಿಸೂಚನೆ ಸಂಖ್ಯೆ: ಸ್ವಯಂಸಾಯ/08 ಶಾಸನ/2008 ದಿನಾಂಕ: 01-06-2010 ರಲ್ಲಿ ಹೊರಡಿಸಿರುವ ಅಧಿಸೂಚನೆಯ ಪ್ರತಿಗಳನ್ನು ಈ ಪತ್ರದೊಂದಿಗೆ ಲಗತ್ತಿಸಿದ್ದು, ಸಮರ್ಪಣೆ ಮಾಡುವುದನ್ನು cognisable & non-beilable ಅಪರಾಧವಾಗಿ ಮಾಡಿ, ಶಿಕ್ಷೆಯನ್ನು ತೀವ್ರಗೊಳಿಸಿರುವ ಬಗ್ಗೆ ಸ್ವಯಂ ಸೇವಕಿಯರ ಸಭೆಯಲ್ಲಿ ತಿಳಿಸಿ ಮಾಜಿ ದೇವದಾಸಿಯರ ಕುಟುಂಬಗಳಿಗೆ ಅರಿವು ಮೂಡಿಸಲು ಸೂಚಿಸಿದೆ. ಸದರಿ ಅಧಿಸೂಚನೆಯಲ್ಲಿ ಸೂಚಿಸಿರುವಂತೆ (ದೇವದಾಸಿ ಸಮರ್ಪಣಾ ನಿಷೇಧ) ತಿದ್ದುಪಡಿ ಕಾಯ್ದೆಯನ್ವಯ ಕಟ್ಟುನಿಟ್ಟಿನ ಕ್ರಮ ವಹಿಸಲು ನಿರ್ದೇಶಿಸಿದೆ.

ತಿದ್ದುಪಡಿ ನಿಯಮಗಳಲ್ಲಿ ಕೆಳಕಂಡ ಗುರುತರವಾದ ಮಾರ್ಪಾಡುಗಳನ್ನು ಮಾಡಲಾಗಿದೆ.

1) 3A. Power of District magistrate or Executive magistrate to issue injunction prohibiting dedication:- For the purpose of preventing-in-mass dedication as Devadasis and certain days such has full moon day during Jatras. the concerned district magistrate shall be deemed to be the Devadasi Dedication Prohibition Officer with all powers as or conferred on a Devadasi Dedication Prohibition Officer by or under this act.

2) 3B. Rescue. care. protection. welfare and rehabilitation of Women:- The State Government shall take all necessary steps to rehabilitate the woman rescued from dedication, under the ``Devadasi Rehabilitation Programme`` by providing counseling and awareness and shall be economically empowered by involving the said woman in income generating activities, if necessary by providing protection or shelter in remandhome upto six months and see that the said woman shall become self-sustained by availing subsidy and loans through banks.

ಫೋನ್: 080-2663 2792, 2654 2307 ಫ್ಯಾಕ್ಸ್ : 080-2654 2308 ಇ-ಮೇಲ್ : kswdc@bgl.vsnl.net.in

3) 3C. Offences to be cognizable and nonbailable:- An offence punishable under this Act shall be cognizable and non-bailable.
4) 3D. Appointment of Devadasi Dedication Prohibition Officer:- The State Government may, by notification, in the official Gazette, appoint for whole state or such part thereof, as may be specified in that notification, an officer or officers to be known as Devadasi Dedication Probhibition Officer having jurisdiction over the area or areas specified in the notification.
5) 3E. Devadasi Dedication Prohibition Offices to be public servants:- The Devadasi Dedication Prohibition Officers shall be deemed to be public servants within the meaning of section 21 of the Indian Penal Code (Central Act 45 of 1860)

ನಿಮ್ಮ ವಿಶ್ವಾಸಿ,

ವ್ಯವಸ್ಥಾಪಕ ನಿರ್ದೇಶಕರು.
ಕ.ರಾ.ಮ.ಅ.ನಿಗಮ

128

**GOVERNMENT OF KARNATAKA**

NO SAMVYASHAE 8-SHASANA 2008 Karnataka Government secretariat,
Vidhana Soudha
Bangalore, dated: 01.06.2010.

**NOTIFICATION**

Ordered that the translation of the ಕರ್ನಾಟಕ ದೇವದಾಸಿಯರ (ಸಮರ್ಪಣಾ ನಿಷೇಧ) (ತಿದ್ದುಪಡಿ) ಅಧಿನಿಯಮ, 2009 (2010 ರ ಕರ್ನಾಟಕ ಅಧಿನಿಯಮ ಸಂಖ್ಯೆ:1) in the English language, be published as authorised by the Governor of Karnataka under clause (3) of Article 348 of the constitution of India in the Karnataka Gazette for general information.

The following translation of the "ಕರ್ನಾಟಕ ದೇವದಾಸಿಯರ (ಸಮರ್ಪಣಾ ನಿಷೇಧ) " (ತಿದ್ದುಪಡಿ) ಅಧಿನಿಯಮ, 2009 (2010 ರ ಕರ್ನಾಟಕ ಅಧಿನಿಯಮ ಸಂಖ್ಯೆ:1)" in the English language is published in the Official Gazette under the authority of the Governor of Karnataka under clause (3) of Article 348 of the Constitution of India.

xx xx xx

here insert the enclosed matter)

To:

The Compiler, Karnataka Gazette, Bangalore, for publication in Part-IV section 2B of the **Karnataka Gazette Extraordinary dated 1st day of June, 2010** and as per standing orders, supply 200 copies to the Drafting Section, 500 copies to the Women and Child Development Department, 50 copies to the Publication Section and 50 copies to the Codification Section of the Department of Parliamentary Affairs and Legislation.

2. The Director of Translation, M.S.Building, Bangalore.

**Copy to:-**

1. The Secretary to Government, Women and Child Development Department ,M.S.Building, Bangalore.
2. The Registrar, High Court of Karnataka, Bangalore (with a covering letter)
3. The Cabinet Section (C/86/2008)
4. The Publication Section
5. The Codification Section.
6. Spare Copies.

**KARNATAKA ACT NO. 1 OF 2010**

(First published in the Karnataka Gazette Extra-ordinary on the sixth day of February, 2010)

# THE KARNATAKA DEVADASIS (PROHIBITION OF DEDICATION) (AMENDMENT) ACT, 2009

(Received the assent of the President on the Twenty first day of January, 2010)

An Act further to amend the Karnataka Devadasis (Prohibition of Dedication) Act, 1982.

Whereas it is expedient further to amend the Karnataka Devadasis (Prohibition of Dedication) Act, 1982 (Karnataka Act No. 1 of 1984) for the purposes hereinafter appearing;

Be it enacted by the Karnataka State Legislature in the fifty-ninth year of the Republic of India, as follows:-

1. **Short title and commencement.-** (1) This Act may be called the Karnataka Devadasis (Prohibition of Dedication) (Amendment) Act, 2009.

(2) It shall come into force at once.

2. **Insertion of new sections 3A, 3B, 3C, 3D and 3E.-** After section 3 of the Karnataka Devadasis (Prohibition of Dedication) Act, 1982 (Karnataka Act No.1 of 1984), the following shall be inserted, namely:-

"**3A. Power of district magistrate or executive magistrate to issue injunction prohibiting dedication.-** (1) Notwithstanding anything to the contrary contained in this Act, if on an application of the Devadasi Prohibition Officer or on receipt of information through a complaint or otherwise from any person, a District Magistrate or an Executive Magistrate is satisfied that a dedication in contravention of this Act, has been arranged or is about to be solemnised, such Magistrate shall issue a prohibitory injunction against any person including a member of an organisation or an association of persons prohibiting or restraining from such dedication.

(2) An application or a complaint under sub-section (1), may be made by any person having personal knowledge or reason to believe and a non-governmental organisation having reasonable information, relating to the likelihood of taking place of such dedication.

(3) The District Magistrate or the Executive Magistrate may also take suo motu cognisance on the basis of any reliable report or information or complaint as the case may be.

(4) For the purpose of preventing en-mass dedication as Devadasis on certain days such as full moon day during Jathras, the concerned District Magistrate shall be deemed to be the Devadasi Dedication Prohibition Officer with all powers as are conferred on a Devadasi Dedication Prohibition Officer by or under this Act.

(5) The District Magistrate shall also have additional powers to stop or prevent dedication and for this purpose, he may take all appropriate measures including use of the minimum force required.

(6) No prohibitory injunction under sub-section (1) shall be issued against any person or member of any organisation or association of persons unless the magistrate concerned has previously given notice to such person, members of the organisation or association of persons, as the case may be, and has offered him or them an opportunity to show cause against the issue of the injunction:

Provided that in the case of any urgency, the magistrate concerned shall have the power to issue an interim injunction without giving any notice under this sub-section.

(7) An injunction issued under sub-section (1) may be confirmed or vacated after giving notice and hearing the party against whom the injunction was issued.

(8) The District Magistrate or the Executive Magistrate may either on its own motion or on the application of any person aggrieved, rescind or alter an injunction issued under sub-section (1).

(9) Where an application received under sub-section (1), the District Magistrate or the Executive Magistrate shall afford the applicant an opportunity of appearing before it either in person or by an advocate. After hearing the applicant, the District Magistrate or the Executive Magistrate rejects the application wholly or in part, he shall record in writing its reasons for so doing.

(10) Whoever knowing that an injunction has been issued under sub-section (1) against him disobeys such injunction shall be punishable with imprisonment of either description for a term which may extend to three years but which shall not be less than two years or with a fine which shall not be less than rupees two thousand but which may extend to rupees ten thousand or with both.

**3B. Rescue, care, protection, welfare and rehabilitation of woman.-** The State Government shall take all necessary steps to rehabilitate the woman rescued from dedication, under the "Devadasi Rehabilitation Programme" by providing counselling and awareness and shall be economically empowered by involving the said woman in income generating activities, if necessary by providing protection or shelter in remand home upto six months and see that the said woman shall become self-sustained by availing subsidy and loans through banks.

**3C. Offences to be cognizable and nonbailable.-** An offence punishable under this Act shall be cognisable and non-bailable.

**3D. Appointment of Devadasi Dedication Prohibition Officer.-** (1) The State Government may, by notification, in the official Gazette, appoint for whole state or such part thereof, as may be specified in that notification, an officer or officers to be known as Devadasi Dedication Prohibition Officer having jurisdiction over the area or areas specified in the notification.

(2) Without prejudice to sub-section (1), the concerned Deputy Director, Assistant Director, Women and Child Development Department or the Project Officer shall be the Devadasi Dedication Prohibition Officer in their respective jurisdiction.

(3) The State Government may also request a respectable member of the locality with a record of social service or an officer of the Gram Panchayath or Municipality or an officer of the Government or any public sector undertaking or an office bearer of any non-governmental organisation to assist the Devadasi Dedication Prohibition Officer and such member, officer or office bearer, as the case may be, shall be bound to act accordingly.

(4) It shall be the duty of the Devadasi Dedication Prohibition Officer,-

(a) to prevent dedication by making an application under sub-section (1) of section 3A and by taking such actions as he may deem fit;

(b) to collect evidences for the effective prosecution of persons contravening the provisions of the Act;

(c) to advise either individual cases or counsel the residents of the locality generally not to indulge in promoting, helping, aiding or allowing the dedication of devadasi;

(d) to create awareness of the evil which results from dedication;

(e) to sensitize the community on the issue of dedication;

(f) to take action to write the Panchanama report at the place of incident itself and obtain the signatures of witnesses;

(g) to furnish such periodical returns and statistics as the State Government may direct; and

(h) to discharge such other functions and duties as may be assigned to him by the State Government.

(5) The State Government may, by notification, in the Official Gazette, subject to such conditions and limitations, invest with the Devadasi Dedication Prohibition Officer with such powers of a police officer as may be specified in the notification and the Devadasi Dedication Prohibition Officer shall exercise such powers subject to such conditions and limitations, as may be specified therein.

(6) The Devadasi Dedication Prohibition Officer shall have the power to move the court for an order under section 3B for rehabilitation of rescued woman.

(7) The Devadasi Dedication Prohibition Officer shall report the same to the Secretary to Government, Women and Child Development Department, the Managing Director, the Karnataka State Women's Development Corporation and

the Deputy Commissioner of respective Districts whenever the incident of dedication occurs or likely to occur in his jurisdiction.

**3E. Devadasi Dedication Prohibition Officers to be public servants.-** The Devadasi Dedication Prohibition Officers shall be deemed to be public servants within the meaning of section 21 of the Indian Penal Code (Central Act 45 of 1860)."

The above translation of the ಕರ್ನಾಟಕ ದೇವದಾಸಿಯರ (ಸಮರ್ಪಣಾ ನಿಷೇಧ) (ತಿದ್ದುಪಡಿ) ಅಧಿನಿಯಮ, 2009 (2010ರ ಕರ್ನಾಟಕ ಅಧಿನಿಯಮ ಸಂಖ್ಯೆ: 1) be published in the Official Gazette under clause (3) of Article 348 of the Constitution of India.

**H.R.BHARDWAJ**
**GOVERNOR OF KARNATAKA**

By Order and in the name of
the Governor of Karnataka,

**(G.K. BOREGOWDA)**
Secretary to Government
Department of Parliamentary Affairs
and Legislation.

ಕರ್ನಾಟಕ ಸರ್ಕಾರ

ಸಂಖ್ಯೆ: ಮಮಇ 66 ಮಅನಿ 2007(ಪಿ)(2)

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ: 09.03.2010.

ಇಂದ,
ಸರ್ಕಾರದ ಕಾರ್ಯದರ್ಶಿಗಳು,
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ,
ಬೆಂಗಳೂರು.

ಇವರಿಗೆ,
ವ್ಯವಸ್ಥಾಪಕ ನಿರ್ದೇಶಕರು,
ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮ,
ಬೆಂಗಳೂರು.

5879
18 MAR 2010

ಮಾನ್ಯರೇ,

ವಿಷಯ: ಕರ್ನಾಟಕ ದೇವದಾಸಿಯರ (ಸಮರ್ಪಣಾ ನಿಷೇಧ) (ತಿದುಪಡಿ) ನಿಯಮಗಳು 1988 ಇವುಳಿಗೆ ಇತದ್ದುಪಡಿ ತರುವ ಬಗ್ಗೆ.

ಉಲ್ಲೇಖ: ಸರ್ಕಾರದ ಕಾರ್ಯದರ್ಶಿ, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನಾ ಇಲಾಖೆ, ಇವರ ಅಧಿಸೂಚನೆ ಸಂಖ್ಯೆ:ಸಂವ್ಯಶಾಇ :08:ಶಾಸನ:2008, ದಿನಾಂಕ: 06.02.2010

*****

ಮೇಲ್ಕಾಣಿಸಿದ ವಿಷಯಕ್ಕೆ ಸಂಬಂಧಿಸಿದಂತೆ, ಕರ್ನಾಟಕ ದೇವದಾಸಿಯರ [ಸಮರ್ಪಣಾ ನಿಷೇದ] ನಿಯಮಗಳು 1988 ಇವುಗಳಿಗೆ ತಿದ್ದುಪಡಿ ತರುವ ಕುರಿತು ಸರ್ಕಾರದ ಕಾರ್ಯದರ್ಶಿ, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನಾ ಇಲಾಖೆ ಇವರ ಅಧಿಸೂಚನೆ ಸಂಖ್ಯೆ:ಸಂವ್ಯಶಾಇ:08:ಶಾಸನ: 2008, ದಿನಾಂಕ: 06.02.2010ರ ಪ್ರತಿಯನ್ನು ಇದರೊಂದಿಗೆ ಲಗತ್ತಿಸಿ ಮುಂದಿನ ಸೂಕ್ತ ಕ್ರಮಕ್ಕಾಗಿ ತಮಗೆ ಕಳುಹಿಸಿಕೊಡಲು ನಿರ್ದೇಶಿಸಲ್ಪಟ್ಟಿದ್ದೇನೆ.

ತಮ್ಮ ನಂಬುಗೆಯ,
(ಬಿ.ಕಮಲಮ್ಮ)
ಸರ್ಕಾರದ ಅಧೀನ ಕಾರ್ಯದರ್ಶಿ-2,
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ.

The amendment has many implications. We may have to send suitable proposal to the Govt. reg. Statutory appointment of P.O. of DRP.

19/3
20/3

KA / BG - GPO/ 2515 /WPP-47/ 2009 - 2011

# ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ವಿಶೇಷ ಪತ್ರಿಕೆ

| ಭಾಗ – IV-A | ಬೆಂಗಳೂರು, ಶನಿವಾರ, ಫೆಬ್ರವರಿ ೬, ೨೦೧೦ (ಮಾಘ ೧೭, ಶಕ ವರ್ಷ ೧೯೩೧) | ನಂ. ೧೪೫ |
|---|---|---|

## ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನಾ ಸಚಿವಾಲಯ

## ಅಧಿಸೂಚನೆ

**ಸಂ. ಸಂವ್ಯಶಾಇ : 8 : ಶಾಸನ : 2008, ಬೆಂಗಳೂರು, ದಿನಾಂಕ : 6ನೇ ಫೆಬ್ರವರಿ, 2010**

ಕರ್ನಾಟಕ ದೇವದಾಸಿಯರ (ಸಮರ್ಪಣಾ ನಿಷೇಧ) (ತಿದ್ದುಪಡಿ) ವಿಧೇಯಕ, 2009ಕ್ಕೆ 2010ರ ಜನವರಿ 21ನೇ ದಿನಾಂಕದಂದು ರಾಷ್ಟ್ರಪತಿಗಳ ಒಪ್ಪಿಗೆ ದೊರೆತಿದ್ದು, ಸಾಮಾನ್ಯ ತಿಳುವಳಿಕೆಗಾಗಿ ಇದನ್ನು 2010 ರ ಕರ್ನಾಟಕ ಅಧಿನಿಯಮ ಸಂಖ್ಯೆ : 1 ಎಂಬುದಾಗಿ ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟಿಸಬೇಕೆಂದು ಆದೇಶಿಸಲಾಗಿದೆ.

## 2010 ರ ಕರ್ನಾಟಕ ಅಧಿನಿಯಮ ಸಂಖ್ಯೆ-1

(2010ರ ಫೆಬ್ರವರಿ ಆರನೇ ದಿನಾಂಕದಂದು ಕರ್ನಾಟಕ ರಾಜ್ಯ ಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟವಾಗಿದೆ)

## ಕರ್ನಾಟಕ ದೇವದಾಸಿಯರ (ಸಮರ್ಪಣಾ ನಿಷೇಧ) (ತಿದ್ದುಪಡಿ) ಅಧಿನಿಯಮ, 2009

(2010ರ ಜನವರಿ ಇಪ್ಪತ್ತೊಂದನೇ ದಿನಾಂಕದಂದು ರಾಷ್ಟ್ರಪತಿಯವರ ಅನುಮೋದನೆಯನ್ನು ಪಡೆಯಲಾಗಿದೆ)

ಕರ್ನಾಟಕ ದೇವದಾಸಿಯರ (ಸಮರ್ಪಣಾ ನಿಷೇಧ) ಅಧಿನಿಯಮ, 1982ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ಅಧಿನಿಯಮ.

ಇಲ್ಲಿ ಇನ್ನು ಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕರ್ನಾಟಕ ದೇವದಾಸಿಯರ (ಸಮರ್ಪಣಾ ನಿಷೇಧ) ಅಧಿನಿಯಮ, 1982ನ್ನು (1984ರ ಕರ್ನಾಟಕ ಅಧಿನಿಯಮ ಸಂಖ್ಯೆ 1) ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ ;

ಇದು ಭಾರತ ಗಣರಾಜ್ಯದ ಐವತ್ತೊಂಬತ್ತನೆ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನ ಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ ;

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ:-** (1) ಈ ಅಧಿನಿಯಮವನ್ನು ಕರ್ನಾಟಕ ದೇವದಾಸಿಯರ (ಸಮರ್ಪಣಾ ನಿಷೇಧ) (ತಿದ್ದುಪಡಿ) ಅಧಿನಿಯಮ, 2009 ಎಂದು ಕರೆಯತಕ್ಕದ್ದು.

(2) ಇದು ಈ ಕೂಡಲೇ ಜಾರಿಗೆ ಬರತಕ್ಕದ್ದು.

**2. 3ಎ, 3ಬಿ, 3ಸಿ, 3ಡಿ ಮತ್ತು 3ಇ ಹೊಸ ಪ್ರಕರಣಗಳ ಸೇರ್ಪಡೆ.-** ಕರ್ನಾಟಕ ದೇವದಾಸಿಯರ (ಸಮರ್ಪಣಾ ನಿಷೇಧ) ಅಧಿನಿಯಮ, 1982ರ (1984ರ ಕರ್ನಾಟಕ ಅಧಿನಿಯಮ ಸಂಖ್ಯೆ 1) 3ನೇ ಪ್ರಕರಣದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ :-

"**3ಎ. ಸಮರ್ಪಣಾ ನಿಷೇಧಕ ನಿರ್ಬಂಧಕಾಜ್ಞೆಯನ್ನು ಹೊರಡಿಸಲು ಜಿಲ್ಲಾ ಮ್ಯಾಜಿಸ್ಟ್ರೇಟನಿಗೆ ಅಥವಾ ಕಾರ್ಯಕಾರಿ ಮ್ಯಾಜಿಸ್ಟ್ರೇಟನಿಗೆ ಇರುವ ಅಧಿಕಾರ.-** (1) ಈ ಅಧಿನಿಯಮದಲ್ಲಿ ಅದಕ್ಕೆ ವಿರುದ್ಧವಾಗಿ ಏನೇ ಇದ್ದರೂ, ದೇವದಾಸಿ ಸಮರ್ಪಣಾ ನಿಷೇಧಕ ಅಧಿಕಾರಿಯ ಅರ್ಜಿಯ ಮೂಲಕ ಅಥವಾ ಯಾವುದೇ ವ್ಯಕ್ತಿಯ ದೂರಿನ ಮೂಲಕ ಅಥವಾ ಅನ್ಯಥಾ ಮಾಹಿತಿಯನ್ನು ಪಡೆದ ಮೇಲೆ ಜಿಲ್ಲಾ ಮ್ಯಾಜಿಸ್ಟ್ರೇಟನು ಅಥವಾ ಕಾರ್ಯಕಾರಿ ಮ್ಯಾಜಿಸ್ಟ್ರೇಟನು, ಅಧಿನಿಯಮವನ್ನು ಉಲ್ಲಂಘಿಸಿ ಸಮರ್ಪಣೆಯನ್ನು ವ್ಯವಸ್ಥೆ ಮಾಡಲಾಗಿದೆ ಅಥವಾ ಅದನ್ನು ಇನ್ನೇನು ವಿಧ್ಯುಕ್ತಗೊಳಿಸಲಿದ್ದಾರೆ ಎಂದು ಮನಗಂಡರೆ ಅಂಥ ಮ್ಯಾಜಿಸ್ಟ್ರೇಟನು ಒಂದು ಸಂಸ್ಥೆಯ ಅಥವಾ ವ್ಯಕ್ತಿಗಳ ಸಂಘದ ಒಬ್ಬ ಸದಸ್ಯನೂ ಸೇರಿದಂತೆ ಯಾವನೇ ವ್ಯಕ್ತಿಯ ವಿರುದ್ಧ ಅಂಥ ಸಮರ್ಪಣೆಯನ್ನು ನಿಷೇಧಿಸಿ ಅಥವಾ ನಿಗ್ರಹಿಸಿ ಒಂದು ನಿಷೇಧಕ ನಿರ್ಬಂಧಕಾಜ್ಞೆಯನ್ನು ಹೊರಡಿಸತಕ್ಕದ್ದು.

(2) ಅಂಥ ಸಮರ್ಪಣೆಯು ನಡೆಯಬಹುದಾದ ಸಂಭಾವ್ಯತೆಯ ಬಗ್ಗೆ ವೈಯಕ್ತಿಕ ತಿಳುವಳಿಕೆಯನ್ನು ಹೊಂದಿರುವ ಅಥವಾ ನಂಬಲು ಕಾರಣಗಳಿರುವ ಯಾವೊಬ್ಬ ವ್ಯಕ್ತಿಯೂ ಮತ್ತು ಸಾಕಷ್ಟು ಮಾಹಿತಿಯನ್ನು ಹೊಂದಿರುವ ಒಂದು ಸರ್ಕಾರೇತರ ಸಂಸ್ಥೆಯು (1)ನೇ ಉಪ-ಪ್ರಕರಣದ ಅಡಿಯಲ್ಲಿ ಒಂದು ಅರ್ಜಿಯನ್ನು ಅಥವಾ ಒಂದು ದೂರನ್ನು ನೀಡಬಹುದು.

(3) ಸಂದರ್ಭಾನುಸಾರ ಯಾವುದೇ ನಂಬಲರ್ಹವಾದ ವರದಿ ಅಥವಾ ಮಾಹಿತಿ ಅಥವಾ ದೂರಿನ ಆಧಾರದ ಮೇಲೆ ಸಹ ಜಿಲ್ಲಾ ಮ್ಯಾಜಿಸ್ಟ್ರೇಟನು ಅಥವಾ ಕಾರ್ಯಕಾರಿ ಮ್ಯಾಜಿಸ್ಟ್ರೇಟನು ಸ್ವಪ್ರೇರಣೆಯಿಂದ ಸಂಜ್ಞಾನಕ್ಕೆ ತೆಗೆದುಕೊಳ್ಳಬಹುದು.

(4) ಜಾತ್ರೆಗಳಲ್ಲಿ ಹುಣ್ಣಿಮೆಯಂಥ ಕೆಲವು ದಿನಗಳಲ್ಲಿ ಮಹಿಳೆಯರನ್ನು ದೇವದಾಸಿಯಾರಾಗಿ ಸಾಮೂಹಿಕವಾಗಿ ಸಮರ್ಪಣೆ ಮಾಡುವುದನ್ನು ತಡೆಗಟ್ಟುವ ಉದ್ದೇಶಕ್ಕಾಗಿ, ಸಂಬಂಧಪಟ್ಟ ಜಿಲ್ಲಾ ಮ್ಯಾಜಿಸ್ಟ್ರೇಟನನ್ನು ಈ ಅಧಿನಿಯಮದ ಮೂಲಕ ಅಥವಾ ಅದರಡಿಯಲ್ಲಿ, ದೇವದಾಸಿ ಸಮರ್ಪಣಾ ನಿಷೇಧಕ ಅಧಿಕಾರಿಗೆ ಪ್ರದಾನ ಮಾಡಲಾದ ಎಲ್ಲಾ ಅಧಿಕಾರಗಳನ್ನುಳ್ಳ, ದೇವದಾಸಿ ಸಮರ್ಪಣಾ ನಿಷೇಧಕ ಅಧಿಕಾರಿಯೆಂದು ಭಾವಿಸತಕ್ಕದ್ದು.

(5) ಜಿಲ್ಲಾ ಮ್ಯಾಜಿಸ್ಟ್ರೇಟನು, ಸಮರ್ಪಣೆಯನ್ನು ನಿಲ್ಲಿಸುವುದಕ್ಕೆ ಅಥವಾ ತಪ್ಪಿಸುವುದಕ್ಕೆ ಹೆಚ್ಚಿನ ಅಧಿಕಾರವನ್ನು ಸಹ ಹೊಂದಿರತಕ್ಕದ್ದು ಮತ್ತು ಈ ಉದ್ದೇಶಕ್ಕಾಗಿ, ಆತನು ಅಗತ್ಯವಾಗಬಹುದಾದ ಕನಿಷ್ಠ ಬಲಪ್ರಯೋಗವನ್ನು ಮಾಡುವುದೂ ಒಳಗೊಂಡಂತೆ ಎಲ್ಲಾ ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳಬಹುದು.

(6) (1)ನೇ ಉಪಪ್ರಕರಣದಡಿಯಲ್ಲಿ ಯಾವುದೇ ವ್ಯಕ್ತಿಯ ಅಥವಾ ಯಾವುದೇ ಸಂಸ್ಥೆಯ ಅಥವಾ ವ್ಯಕ್ತಿಗಳ ಸಂಘದ ಸದಸ್ಯನ ವಿರುದ್ಧ ಯಾವುದೇ ನಿಷೇಧಕ ನಿರ್ಬಂಧಕಾಜ್ಞೆಯನ್ನು ಸಂಬಂಧಪಟ್ಟ ಮ್ಯಾಜಿಸ್ಟ್ರೇಟನು ಅಂಥ ವ್ಯಕ್ತಿ, ಸಂಸ್ಥೆಯ ಅಥವಾ ಸಂಘದ ಸದಸ್ಯರುಗಳಿಗೆ ಮುಂಚಿತವಾಗಿ ನೋಟೀಸನ್ನು ನೀಡಿದ್ದ ಹೊರತು ಮತ್ತು ನಿರ್ಬಂಧಕಾಜ್ಞೆಯನ್ನು ಏಕೆ ಹೊರಡಿಸಬಾರದು ಎಂಬ ಬಗ್ಗೆ ಕಾರಣ ತೋರಿಸುವ ಅವಕಾಶವನ್ನು ಆತನಿಗೆ ಅಥವಾ ಅವರಿಗೆ ನೀಡಿದ್ದ ಹೊರತು ಹೊರಡಿಸತಕ್ಕದ್ದಲ್ಲ ;

ಪರಂತು, ಯಾವುದೇ ತುರ್ತು ಸಂದರ್ಭದಲ್ಲಿ, ಸಂಬಂಧಪಟ್ಟ ಮ್ಯಾಜಿಸ್ಟ್ರೇಟನು ಈ ಉಪ ಪ್ರಕರಣದಡಿ ಯಾವುದೇ ನೋಟೀಸನ್ನು ನೀಡದೆ ಒಂದು ಮಧ್ಯಂತರ ನಿರ್ಬಂಧಕಾಜ್ಞೆಯನ್ನು ಹೊರಡಿಸುವ ಅಧಿಕಾರವನ್ನು ಹೊಂದಿರತಕ್ಕದ್ದು.

(7) ಯಾವ ಪಕ್ಷಕಾರನ ವಿರುದ್ಧ ನಿರ್ಬಂಧಕಾಜ್ಞೆಯನ್ನು ಹೊರಡಿಸಲಾಗಿದೆಯೋ ಆತನಿಗೆ ನೋಟಿಸನ್ನು ನೀಡಿದ ತರುವಾಯ ಮತ್ತು ಆತನ ಹೇಳಿಕೆಯನ್ನು ಪಡೆದ ಮೇಲೆ (1)ನೇ ಉಪಪ್ರಕರಣದಡಿಯಲ್ಲಿ ಹೊರಡಿಸಿದ ನಿರ್ಬಂಧಕಾಜ್ಞೆಯನ್ನು ಸ್ಥಿರೀಕರಿಸಬಹುದು ಅಥವಾ ತೆರವುಗೊಳಿಸಬಹುದು.

(8) ಜಿಲ್ಲಾ ಮ್ಯಾಜಿಸ್ಟ್ರೇಟನು ಅಥವಾ ಕಾರ್ಯಕಾರಿ ಮ್ಯಾಜಿಸ್ಟ್ರೇಟನು ತಾನಾಗಿಯೇ ಆಗಲಿ ಅಥವಾ ಯಾವುದೇ ಬಾಧಿತ ವ್ಯಕ್ತಿಯ ಅರ್ಜಿಯ ಮೇಲಾಗಲಿ (1)ನೇ ಉಪಪ್ರಕರಣದಡಿಯಲ್ಲಿ ಹೊರಡಿಸಲಾದ ನಿರ್ಬಂಧಕಾಜ್ಞೆಯನ್ನು ರದ್ದುಗೊಳಿಸಬಹುದು ಅಥವಾ ಮಾರ್ಪಡಿಸಬಹುದು.

(9) (1)ನೇ ಉಪಪ್ರಕರಣದಡಿಯಲ್ಲಿ ಒಂದು ಅರ್ಜಿಯು ಸ್ವೀಕರಿಸಿದ ಮೇಲೆ ಜಿಲ್ಲಾ ಮ್ಯಾಜಿಸ್ಟ್ರೇಟನು ಅಥವಾ ಕಾರ್ಯಕಾರಿ ಮ್ಯಾಜಿಸ್ಟ್ರೇಟನು ಅರ್ಜಿದಾರನಿಗೆ ಖುದ್ದಾಗಿ ಅಥವಾ ತನ್ನ ನ್ಯಾಯವಾದಿಯ ಮೂಲಕ ತನ್ನ ಮುಂದೆ ಹಾಜರಾಗಲು ಅವಕಾಶವನ್ನು ನೀಡತಕ್ಕದ್ದು. ಅರ್ಜಿದಾರನ ಅಹವಾಲನ್ನು ಕೇಳಿದ ತರುವಾಯ, ಜಿಲ್ಲಾ ಮ್ಯಾಜಿಸ್ಟ್ರೇಟನು ಅಥವಾ ಕಾರ್ಯಕಾರಿ ಮ್ಯಾಜಿಸ್ಟ್ರೇಟನು ಅರ್ಜಿಯನ್ನು ಪೂರ್ಣವಾಗಿ ಅಥವಾ ಭಾಗಶಃ ತಿರಸ್ಕರಿಸಬಹುದು ಮತ್ತು ಹಾಗೆ ಮಾಡಿದ್ದಕ್ಕೆ ತನ್ನ ಕಾರಣಗಳನ್ನು ಲಿಖಿತದಲ್ಲಿ ದಾಖಲಿಸತಕ್ಕದ್ದು.

(10) (1)ನೇ ಉಪಪ್ರಕರಣದಡಿಯಲ್ಲಿ ತನ್ನ ವಿರುದ್ಧ ನಿರ್ಬಂಧಕಾಜ್ಞೆಯನ್ನು ಹೊರಡಿಸಲಾಗಿದೆ ಎಂದು ಗೊತ್ತಿರುವ ಯಾವೊಬ್ಬ ವ್ಯಕ್ತಿಯು, ಅಂಥ ನಿರ್ಬಂಧಕಾಜ್ಞೆಯನ್ನು ಉಲ್ಲಂಘಿಸಿದರೆ, ಆತನು ಮೂರು ವರ್ಷಗಳ ಅವಧಿಯವರೆಗೆ ವಿಸ್ತರಿಸಬಹುದಾದ ಆದರೆ ಎರಡು ವರ್ಷಗಳಿಗಿಂತ ಕಡಿಮೆಯಲ್ಲದ ಅವಧಿಯವರೆಗೆ ಎರಡರಲ್ಲೊಂದು ಬಗೆಯ ಕಾರಾವಾಸದಿಂದ ಅಥವಾ ಎರಡು ಸಾವಿರ ರೂಪಾಯಿಗಳಿಗೆ ಕಡಿಮೆಯಲ್ಲದ ಮತ್ತು ಹತ್ತು ಸಾವಿರ ರೂಪಾಯಿಗಳಿಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

3ಬಿ. **ಮಹಿಳೆಯ ಕಾಪಾಡುವಿಕೆ, ಆರೈಕೆ, ಸಂರಕ್ಷಣೆ, ಕ್ಷೇಮಾಭಿವೃದ್ಧಿ ಮತ್ತು ಪುನರ್ವಸತಿ.–** ರಾಜ್ಯ ಸರ್ಕಾರವು, 'ದೇವದಾಸಿ ಪುನರ್ವಸತಿ ಯೋಜನೆ'ಯ ಅಡಿಯಲ್ಲಿ ಸಲಹೆ ನೀಡುವುದು ಮತ್ತು ಜಾಗೃತಿ ಮೂಡಿಸುವುದರ ಮೂಲಕ ಸಮರ್ಪಣೆಯಾಗುವುದರಿಂದ ಕಾಪಾಡಿದಂತಹ ಮಹಿಳೆಯ ಪುನರ್ವಸತಿಗೆ ಅವಶ್ಯಕವಾದ ಎಲ್ಲಾ ಕ್ರಮಗಳನ್ನು ಕೈಗೊಳ್ಳತಕ್ಕದ್ದು ಮತ್ತು ಅವಶ್ಯವಿದ್ದಲ್ಲಿ ರಿಮಾಂಡ್ ಹೋಮ್‌ನಲ್ಲಿ ಆರು ತಿಂಗಳವರೆಗೆ ರಕ್ಷಣೆಯನ್ನು ನೀಡುವ ಅಥವಾ ಆಶ್ರಯವನ್ನು ನೀಡುವ ಮೂಲಕ ಆದಾಯಗಳಿಕೆ ಚಟುವಟಿಕೆಗಳಲ್ಲಿ ಸದರಿ ಮಹಿಳೆಯನ್ನು ತೊಡಗಿಸಿ ಆಕೆಯನ್ನು ಆರ್ಥಿಕವಾಗಿ ಸಬಲಗೊಳಿಸತಕ್ಕದ್ದು ಹಾಗೂ ಸದರಿ ಮಹಿಳೆಯು ಬ್ಯಾಂಕ್‌ಗಳಿಂದ ಸಹಾಯಧನ ಮತ್ತು ಸಾಲಗಳನ್ನು ಪಡೆದು ಸ್ವಾವಲಂಬಿಯಾಗುವಂತೆ ನೋಡಿಕೊಳ್ಳತಕ್ಕದ್ದು.

3ಸಿ. **ಅಪರಾಧಗಳು ಸಂಜ್ಞೇಯ ಮತ್ತು ಜಾಮೀನೀಯವಲ್ಲದ್ದು ಆಗಿರತಕ್ಕದ್ದು.–** ಈ ಅಧಿನಿಯಮದ ಅಡಿಯಲ್ಲಿ ದಂಡನೀಯವಾದ ಅಪರಾಧವು ಸಂಜ್ಞೇಯ ಮತ್ತು ಜಾಮೀನೀಯವಲ್ಲದ್ದಾಗಿರತಕ್ಕದ್ದು.

3ಡಿ. **ದೇವದಾಸಿ ಸಮರ್ಪಣಾ ನಿಷೇಧಕ ಅಧಿಕಾರಿಯ ನೇಮಕಾತಿ.–** (1) ರಾಜ್ಯ ಸರ್ಕಾರವು, ರಾಜ್ಯ ಪತ್ರದಲ್ಲಿ ಅಧಿಸೂಚಿಸುವ ಮೂಲಕ ಇಡೀ ರಾಜ್ಯಕ್ಕೆ ಅಥವಾ ಆ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಪ್ರದೇಶಕ್ಕೆ ಸದರಿ ನಿರ್ದಿಷ್ಟಪಡಿಸಿದ ಪ್ರದೇಶ ಅಥವಾ ಪ್ರದೇಶಗಳ ಮೇಲೆ ಅಧಿಕಾರ ವ್ಯಾಪ್ತಿಯುಳ್ಳ 'ದೇವದಾಸಿ ಸಮರ್ಪಣಾ ನಿಷೇಧಕ ಅಧಿಕಾರಿ' ಎಂಬ ಅಧಿಕಾರಿ ಅಥವಾ ಅಧಿಕಾರಿಗಳನ್ನು ನೇಮಕ ಮಾಡತಕ್ಕದ್ದು.

(2) (1)ನೇ ಉಪ ಪ್ರಕರಣಕ್ಕೆ ಪ್ರತಿಕೂಲವಾಗದಂತೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಸಂಬಂಧಪಟ್ಟ ಉಪ ನಿರ್ದೇಶಕರು, ಸಹಾಯಕ ನಿರ್ದೇಶಕರು ಅಥವಾ ಯೋಜನಾ ಅಧಿಕಾರಿಯು ತಮ್ಮ ತಮ್ಮ ಅಧಿಕಾರ ವ್ಯಾಪ್ತಿಯ ಪ್ರದೇಶದಲ್ಲಿ ದೇವದಾಸಿ ಸಮರ್ಪಣಾ ನಿಷೇಧಕ ಅಧಿಕಾರಿಗಳಾಗಿರತಕ್ಕದ್ದು.

(3) ರಾಜ್ಯ ಸರ್ಕಾರವು, ಸಮಾಜಸೇವೆಯಲ್ಲಿ ಒಳ್ಳೆಯ ಹೆಸರನ್ನು ಪಡೆದಿರುವ ಸಂಬಂಧಿಸಿದ ಸ್ಥಳೀಯ ಗೌರವಾನ್ವಿತ ಸದಸ್ಯ ಅಥವಾ ಗ್ರಾಮ ಪಂಚಾಯತಿ ಅಥವಾ ಮುನ್ಸಿಪಾಲಿಟಿಯ ಒಬ್ಬ ಅಧಿಕಾರಿ ಅಥವಾ ಸರ್ಕಾರಿ ಅಥವಾ ಯಾವುದೇ ಸಾರ್ವಜನಿಕ ಉದ್ಯಮದ ಒಬ್ಬ ಅಧಿಕಾರಿ ಅಥವಾ ಯಾವುದೇ ಸರ್ಕಾರೇತರ ಸಂಸ್ಥೆಯ ಒಬ್ಬ ಪದಾಧಿಕಾರಿಯನ್ನು ದೇವದಾಸಿ ಸಮರ್ಪಣಾ ನಿಷೇಧಕ ಅಧಿಕಾರಿಗೆ ಸಹಾಯ ನೀಡುವಂತೆ ಕೋರಬಹುದು ಮತ್ತು ಸಂದರ್ಭಾನುಸಾರ ಅಂಥ ಸದಸ್ಯ, ಅಧಿಕಾರಿ ಅಥವಾ ಸಿಬ್ಬಂದಿಯು ಆ ರೀತಿ ವರ್ತಿಸಲು ಬದ್ಧನಾಗಿರತಕ್ಕದ್ದು.

(4) ದೇವದಾಸಿ ಸಮರ್ಪಣಾ ನಿಷೇಧಕ ಅಧಿಕಾರಿಯ ಕರ್ತವ್ಯಗಳು ಈ ಮುಂದಿನಂತಿರತಕ್ಕದ್ದು,-

(ಎ) 3ಎ ಪ್ರಕರಣದ (1)ನೇ ಉಪ ಪ್ರಕರಣದ ಅಡಿಯಲ್ಲಿ ಅರ್ಜಿಯನ್ನು ಸಲ್ಲಿಸಿ ಮತ್ತು ತಾನು ಸೂಕ್ತವೆಂದು ಭಾವಿಸುವಂಥ ಕ್ರಮವನ್ನು ಕೈಗೊಂಡು ದೇವದಾಸಿ ಸಮರ್ಪಣೆಯನ್ನು ನಿಷೇಧಿಸುವುದು ;

(ಬಿ) ಅಧಿನಿಯಮದ ಉಪಬಂಧಗಳನ್ನು ಉಲ್ಲಂಘಿಸುವ ವ್ಯಕ್ತಿಗಳ ವಿರುದ್ಧ ಪರಿಣಾಮಕಾರಿಯಾಗಿ ಅಭಿಯೋಜನೆ ಮಾಡುವುದಕ್ಕಾಗಿ ಸಾಕ್ಷ್ಯಗಳನ್ನು ಸಂಗ್ರಹಿಸುವುದು ;

(ಸಿ) ದೇವದಾಸಿ ಸಮರ್ಪಣೆಗೆ ಪ್ರೋತ್ಸಾಹಿಸಬೇಡಿ, ಸಹಾಯ ನೀಡಬೇಡಿ, ನೆರವು ನೀಡಬೇಡಿ ಅಥವಾ ಅವಕಾಶ ನೀಡಬೇಡಿ ಎಂದು ವೈಯಕ್ತಿಕ ಪ್ರಕರಣಗಳಲ್ಲಿ ಬುದ್ಧಿವಾದ ಹೇಳುವುದು ಅಥವಾ ಆ ಪ್ರದೇಶದ ನಿವಾಸಿಗಳಿಗೆ ಸಲಹೆಗಳನ್ನು ನೀಡುವುದು ;

(ಡಿ) ಸಮರ್ಪಣೆಯಿಂದಾಗುವ ದುಷ್ಪರಿಣಾಮಗಳ ಬಗ್ಗೆ ಜಾಗೃತಿ ಉಂಟುಮಾಡುವುದು ;

(ಇ) ಸಮರ್ಪಣೆಯು ಎಷ್ಟು ಹೀನಾಯ ಎಂಬುದುದನ್ನು ಸಮುದಾಯಕ್ಕೆ ಮನಗಾಣಿಸುವುದು ;

(ಎಫ್) ಘಟನೆ ನಡೆದ ಸ್ಥಳದಲ್ಲಿಯೇ ಪಂಚನಾಮೆ ವರದಿಯನ್ನು ಬರೆಯಲು ಮತ್ತು ಸಾಕ್ಷಿಗಳ ಸಹಿಯನ್ನು ಪಡೆಯಲು ಕ್ರಮ ಕೈಗೊಳ್ಳುವುದು ;

(ಜಿ) ರಾಜ್ಯ ಸರ್ಕಾರವು ನಿರ್ದೇಶಿಸಬಹುದಾದಂಥ ನಿಯತಕಾಲಿಕ ವರದಿಯನ್ನು ಮತ್ತು ಅಂಕಿ ಅಂಶಗಳನ್ನು ಸಲ್ಲಿಸುವುದು, ಮತ್ತು

(ಎಚ್) ರಾಜ್ಯ ಸರ್ಕಾರವು ತನಗೆ ವಹಿಸಬಹುದಾದಂಥ ಪ್ರಕಾರ್ಯಗಳನ್ನು ನಿರ್ವಹಿಸುವುದು ಮತ್ತು ಅಂಥ ಕರ್ತವ್ಯಗಳನ್ನು ನೆರವೇರಿಸುವುದು.

(5) ರಾಜ್ಯ ಸರ್ಕಾರವು ರಾಜ್ಯ ಪತ್ರದಲ್ಲಿ ಅಧಿಸೂಚಿಸುವ ಮೂಲಕ ಸದರಿ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಷರತ್ತುಗಳಿಗೆ ಮತ್ತು ಪರಿಮಿತಿಗಳಿಗೆ ಒಳಪಟ್ಟು ಪೊಲೀಸು ಅಧಿಕಾರಿಯ ಅಧಿಕಾರಗಳನ್ನು ದೇವದಾಸಿ ಸಮರ್ಪಣಾ ನಿಷೇಧಕ ಅಧಿಕಾರಿಯು ಚಲಾಯಿಸಲು ವಹಿಸಿಕೊಡಬಹುದು ಮತ್ತು ದೇವದಾಸಿ ಸಮರ್ಪಣೆ ನಿಷೇಧಕ ಅಧಿಕಾರಿಯು ಅದರಲ್ಲಿ ನಿರ್ದಿಷ್ಟಪಡಿಸಿದಂಥ ಷರತ್ತುಗಳಿಗೆ ಮತ್ತು ಪರಿಮಿತಿಗಳಿಗೆ ಒಳಪಟ್ಟು ಅಂಥ ಅಧಿಕಾರಗಳನ್ನು ಚಲಾಯಿಸತಕ್ಕದ್ದು.

(6) ದೇವದಾಸಿ ಸಮರ್ಪಣಾ ನಿಷೇಧಕ ಅಧಿಕಾರಿಯು ಕಾಪಾಡಲ್ಪಟ್ಟ ಮಹಿಳೆಯ ಪುನರ್ವಸತಿಗಾಗಿ 3ಬಿ ಪ್ರಕರಣದ ಅಡಿಯಲ್ಲಿ ನ್ಯಾಯಾಲಯದ ಆದೇಶವನ್ನು ಕೋರಿ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಲು ಅಧಿಕಾರವನ್ನು ಹೊಂದಿರತಕ್ಕದ್ದು.

(7) ದೇವದಾಸಿ ಸಮರ್ಪಣಾ ನಿಷೇಧಕ ಅಧಿಕಾರಿಯು ತನ್ನ ಅಧಿಕಾರ ವ್ಯಾಪ್ತಿಯ ಪ್ರದೇಶದಲ್ಲಿ ಸಮರ್ಪಣೆಯ ಪ್ರಕರಣಗಳು ನಡೆದಾಗ ಅಥವಾ ನಡೆಯುವ ಸಂಭವವಿರುವಾಗ ಸದರಿ ವಿಷಯವನ್ನು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಸರ್ಕಾರದ ಕಾರ್ಯದರ್ಶಿಗಳಿಗೆ, ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮದ ವ್ಯವಸ್ಥಾಪಕ ನಿರ್ದೇಶಕರಿಗೆ ಹಾಗೂ ಸಂಬಂಧಿಸಿದ ಜಿಲ್ಲೆಗಳ ಜಿಲ್ಲಾಧಿಕಾರಿಗಳಿಗೆ ವರದಿಮಾಡತಕ್ಕದ್ದು.

3ಇ. **ದೇವದಾಸಿ ಸಮರ್ಪಣಾ ನಿಷೇಧಕ ಅಧಿಕಾರಿಯು ಸಾರ್ವಜನಿಕ ನೌಕರನಾಗಿರುವುದು.**- ದೇವದಾಸಿ ಸಮರ್ಪಣಾ ನಿಷೇಧಕ ಅಧಿಕಾರಿಯು ಭಾರತ ದಂಡ ಸಂಹಿತೆಯ (1860 ರ ಕೇಂದ್ರ ಅಧಿನಿಯಮ 45) 21ನೇ ಪ್ರಕರಣದ ಅರ್ಥ ವ್ಯಾಪ್ತಿಯಲ್ಲಿ ಸಾರ್ವಜನಿಕ ನೌಕರನಾಗಿರುವನೆಂದು ಭಾವಿಸತಕ್ಕದ್ದು."

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಜಿ.ಕೆ.ಬೋರೇಗೌಡ
ಸರ್ಕಾರದ ಕಾರ್ಯದರ್ಶಿ,
ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನಾ ಇಲಾಖೆ.

ಸರ್ಕಾರಿ ಮುದ್ರಣಾಲಯ, ವಿಕಾಸ ಸೌಧ ಘಟಕ, ಬೆಂಗಳೂರು.